ಅ) ಉದ್ಭವಿಸುವುದಿಲ್ಲ.

ವಿಷಯ : ಬೆಂಗಳೂರಿಂದ ಶ್ರೀ ಕುಕ್ಕೆ ಸುಬ್ರಹ್ಮಣ್ಯಕ್ಕೆ ಸೆಮಿ ಲಕ್ಸುರಿ ಬಸ್ ಸೌಕರ್ಯ ಒದಗಿಸುವುದು.

ಪ್ರಶ್ನೆ : 134 (378) ಶ್ರೀ **ಬಾಕೀಲ ಹುಕ್ರಪ್ಪ** (ಸುಳ್ಯ).— ಮಾನ್ಯ ರಾಜ್ಯ ಸಾರಿಗೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಬೆಂಗಳೂರಿನಿಂದ ಶ್ರೀ ಕುಕ್ಕೆ ಸುಬ್ರಹ್ಮಣ್ಯಕ್ಕೆ ರಾತ್ರಿಯ ಸಮಯ ಸೆಮಿ ಲಕ್ಸುರಿ ಬಸ್ ಹಾಕದಿರಲು ಕಾರಣಗಳೇನು ;

ಆ) ಈಗ ಬೆಂಗಳೂರಿಂದ ಸುಬ್ರಹ್ಮಣ್ಯಕ್ಕೆ ಹೋಗುವಾಗ ಎಕ್ಸ್‌ಪ್ರೆಸ್ ಬಸ್ಸನ್ನು ಹಗಲಿನ ಹೊತ್ತು ಬಿಡದಿರಲು ಕಾರಣವೇನು ;

ಇ) ಈ ಬಗ್ಗೆ ಈಗಲಾದರೂ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದೇ ?

ಉತ್ತರ : ಎಂ.ಪಿ. ಪ್ರಕಾಶ್ (ರಾಜ್ಯ ಸಾರಿಗೆ ಮಂತ್ರಿಗಳು).— ಅ) ಹಾಲಿ ಓಡುತ್ತಿರುವ ವೇಗದೂತ ವಾಹನದಲ್ಲಿ ಪ್ರಯಾಣಿಕರ ಸಂಖ್ಯೆ ಉತ್ತೇಜನಕಾರಿಯಾಗಿಲ್ಲ. ಆದುದರಿಂದ ಸೆಮಿ ಲಕ್ಸುರಿ ಬಸ್ಸನ್ನು ಹಾಕಿಲ್ಲ.

ಬೆಂಗಳೂರಿನಿಂದ ಕುಕ್ಕೆ ಸುಬ್ರಹ್ಮಣಕ್ಕೆ 359 ಕಿ.ಮೀ.ಗಳು ಇದ್ದು, ರಾತ್ರಿ ವೇಳೆ ಓಡುತ್ತಿರುವ ಎಕ್ಸ್‌ಪ್ರೆಸ್ ವಾಹನವು ಯಾತ್ರಿಗಳಿಗೆ ಸುಬ್ರಹ್ಮಣ್ಯವನ್ನು ಬೆಳಿಗ್ಗೆ ತಲುಪಲು ಅನುಕೂಲವಾಗಿರುತ್ತದೆ.

ಈ ಮಾರ್ಗದಲ್ಲಿ ಪ್ರಯಾಣಿಕರ ಒತ್ತಡವನ್ನು ಗಮನಿಸಿ ಹೆಚ್ಚಿನ ಬಸ್ ಸೌಕರ್ಯವನ್ನು ಒದಗಿಸಲಾಗುವುದು.

ವಿಷಯ : ಗುಳೇದಗುಡ್ಡದ ಕೆ.ಎಸ್.ಆರ್.ಟಿ.ಸಿ. ಇಲಾಖೆಯವರು ಎರಡು ಪರ್ಸೆಂಟ್ ವಿಮಾ ಚಾರ್ಜು ವಿಧಿಸುವುದು.

ಪ್ರಶ್ನೆ : 135 (184) ಶ್ರೀ **ಮಲ್ಲಿಕಾರ್ಜುನ, ವಿ. ಬನ್ನಿ** (ಗುಳೇದಗುಡ್ಡ).— ಮಾನ್ಯ ರಾಜ್ಯ ಸಾರಿಗೆ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ :—

ಅ) ಗುಳೇದ ಗುಡ್ಡ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಇಲಾಖೆಯ ನಿಯಂತ್ರಣಾಧಿಕಾರಿಯವರು ಕೈಮಗ್ಗದ ಮಾಲಿನ 'ಪಾರ್ಸೆಲ್‌ಗಳಿಗೆ 2 ಪರ್ಸೆಂಟ್ ವಿಮಾ ಚಾರ್ಜು ಮಾಡುತ್ತಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಕರ್ನಾಟಕದಲ್ಲಿ ಎಲ್ಲಿಯೂ ಇಲ್ಲದೆ ಗುಳೇದಗುಡ್ಡಕ್ಕೆ ಮಾತ್ರ 2 ಪರ್ಸೆಂಟ್ ವಿಮಾ ಚಾರ್ಜು ಮಾಡುವುದಕ್ಕೆ ಕಾರಣವೇನು ?

ಉತ್ತರ : ಎಂ.ಪಿ. ಪ್ರಕಾಶ್ (ರಾಜ್ಯ ಸಾರಿಗೆ ಮಂತ್ರಿಗಳು).— ಅ) ಇಲ್ಲಾ.

ಆ) ಮೇಲ್ಕಂಡ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ : ಕೆ.ಆರ್. ಮಿಲ್ ಬೀಗ ಮುದ್ರೆಯ ಬಗ್ಗೆ.

ಪ್ರಶ್ನೆ : 136 (294) ಶ್ರೀ **ಎಮ್.ಎಸ್. ಕೃಷ್ಣನ್** (ರಾಜಾಜಿನಗರ).— ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಕೆ.ಆರ್. ಮಿಲ್ ಯಾವಾಗಿನಿಂದ ಬೀಗ ಮುದ್ರೆ ಆಗಿದೆ ಮತ್ತು ಆದಕ್ಕೆ ಕಾರಣಗಳೇನು ;

ಆ) ಈ ಬೀಗಮುದ್ರೆಯನ್ನು ತೆರವು ಮಾಡಿಸಲು ಮತ್ತು ಕೆಲಸಗಾರರಿಗೆ ಕೆಲಸ ಕೊಡಿಸಲು ಸರ್ಕಾರವು ಏನು ಕ್ರಮ ಕೈಗೊಂಡಿದೆ ?

ಉತ್ತರ : ಶ್ರೀ ಅಜೀಜ್‌ಸೇಠ್ (ಕಾರ್ಮಿಕ ಮಂತ್ರಿಗಳು).— ಅ) 23-11-83ರಿಂದ ಕೆಲಸಗಾರರು ಮುಷ್ಕರದಲ್ಲಿದ್ದಾರೆಂದು ವರದಿಯಾಗಿದೆ ಆದರೆ ಕೆಲಸಗಾರರು ಮಾಲೀಕರೇ ಅವರನ್ನು ಹೊರಗಿಟ್ಟಿದ್ದಾರೆಂದು ಹೇಳುತ್ತಿದ್ದಾರೆ. 14-7-1983ರ ಒಪ್ಪಂದದ ಪ್ರಕಾರ ಹಣಕೊಡಬೇಕೆಂದು ಕಾರ್ಮಿಕರ ಬೇಡಿಕೆ. ಉತ್ಪಾದನೆಯ ಮಟ್ಟ ಇತ್ಯಾದಿಗಳ ಪುನರ್ವಿಮರ್ಶೆಯೂ ಆಗಬೇಕೆಂದು ಮಾಲೀಕರ ಬೇಡಿಕೆ.

ಆ) ವಿಷಯವನ್ನು ರಾಜೀ ಸಂಧಾನಕ್ಕೆ ಎತ್ತಿಕೊಳ್ಳಲಾಗಿದೆ. ಮಾನ್ಯ ಕಾರ್ಮಿಕ ಮಂತ್ರಿಗಳ ಮಟ್ಟದಲ್ಲಿಯೂ ಸಭೆಗಳು ನಡೆಯುತ್ತಿವೆ. ಮುಂದಿನ ಸಭೆ 18-1-1984ರಂದು ನಡೆಯಲಿದೆ.

ವಿಷಯ : ರಾಜ್ಯದಲ್ಲಿ ನಿವೇಶನ ರಹಿತರಿಗೆ ನಿವೇಶನ ಹಂಚುವ ಮತ್ತು ಜನತಾ ಮನೆಗಳ ಬಗ್ಗೆ.

ಪ್ರಶ್ನೆ : 138 (307) ಶ್ರೀ **ಬಿ. ಬಿ. ಚಿಮ್ಮನಕಟ್ಟಿ** (ಬಾದಾಮಿ) ಮತ್ತು ಶ್ರೀ **ಎ. ಕೆ. ಕಟ್ಟಿಮನಿ** (ಮಂದೋಳ್) ಮಾನ್ಯ ವಸತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ; ಅ) 1-1-83ರ ವರೆಗೆ ರಾಜ್ಯದಲ್ಲಿ ನಿವೇಶನ ರಹಿತರಿಗೆ ಹಂಚಲಾದ ನಿವೇಶನಗಳ ಸಂಖ್ಯೆ ಎಷ್ಟು ? (ಜಿಲ್ಲಾವಾರು ಅಂಕಿ-ಅಂಶಗಳನ್ನು ಒದಗಿಸುವುದು)